ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ4(6)ಸಪ್ರೌಶಾ/ಶಾ.ಕಾ.ಪ್ರ/23/2020-21 ದಿನಾಂಕ:31/08/2021

~ : ಸುತ್ತೋಲೆ : ~

ವಿಷಯ: ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ 6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲೆಗಳನ್ನು ಭೌತಿಕವಾಗಿ ಪೂರ್ಣ ಪ್ರಮಾಣದಲ್ಲಿ ಪ್ರಾರಂಭ ಮಾಡುವ ಬಗ್ಗೆ-

ಉಲ್ಲೇಖ:
1. ದಿ:06/08/2021, 14/08/2021 ಮತ್ತು 30/08/2021 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಂತೆ.
2. ಶಾಲೆಗಳಲ್ಲಿ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ)ಸುತ್ತೋಲೆ ಸಂಖ್ಯೆ:ಡಿ.ಎಸ್.ಇಆರ್.ಟಿ./ಇವಿಜಿ/ಶಾ.ಪ್ರಾ/ಪ್ರ.ಕಾ.ವಿ 2020-21 ದಿ:12/08/2021
3. ಈ ಕಛೇರಿಯ ಪತ್ರ ಸಂ:ಎಡಿಎಂ2(1)/ಶೈ.ವ.ನಿ.01/2021-22 ದಿ:10/06/2021.
4. ಡಿ.ಎಸ್.ಇ.ಆರ್.ಟಿ/ಇವಿಜಿ/ಪ.ಶೈ.ಕ್ಯಾ/07/2021-22 ದಿ:30/07/2021
5. ಈ ಕಛೇರಿಯ ಪತ್ರ ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇವಿಜಿ/1-10/ ಮೌಲ್ಯಾಂಕನ/2021-22, ದಿ:11/08/2021.
6. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ4(6)ಸಪ್ರೌಶಾ/ಶಾ.ಕಾ.ಪ್ರ/23/2020-21. ದಿನಾಂಕ:16/08/2021.

*****

ಉಲ್ಲೇಖ (1) ರಂತೆ ರಾಜ್ಯದಲ್ಲಿ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ಭೌತಿಕವಾಗಿ ಪ್ರಾರಂಭಿಸುವ ಕುರಿತು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆರೋಗ್ಯ ಸಚಿವರು ಮತ್ತು ಇಲಾಖೆಯ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ದಿನಾಂಕ:06/09/2021 ರಿಂದ ರಾಜ್ಯದಲ್ಲಿ ಕೋವಿಡ್-19ರ ಸೋಂಕಿನ ಪ್ರಮಾಣ 2% ಗಿಂತ ಕಡಿಮೆ ಇರುವ ತಾಲ್ಲೂಕು/ವಲಯಗಳಲ್ಲಿ (ಕೇರಳ ರಾಜ್ಯದೊಡನೆ ಗಡಿ ಹಂಚಿಕೊಂಡಿರುವ ತಾಲ್ಲೂಕುಗಳನ್ನು ಹೊರತುಪಡಿಸಿ) 9 ಮತ್ತು 10ನೇ ತರಗತಿಗಳ ಜೊತೆಗೆ 6 ರಿಂದ 8ನೇ ತರಗತಿಗಳನ್ನು ಪೂರ್ಣ ಪ್ರಮಾಣದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಭೌತಿಕವಾಗಿ ಪ್ರಾರಂಭಿಸಲು ಹಾಗೂ 1 ರಿಂದ 5ನೇ ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ ಪರಿಸ್ಥಿತಿ ಅವಲೋಕಿಸಿ ನಂತರ ನಿರ್ಧರಿಸಲಾಗುವುದು ಎಂದು ತೀರ್ಮಾನಿಸಲಾಗಿದೆ.

*ಮುಂದುವರೆದು ಕೋವಿಡ್-19ರ ಸೋಂಕಿನ ಪ್ರಮಾಣ ಶೇ.2 ಕ್ಕಿಂತ ಹೆಚ್ಚು ಇರುವ ತಾಲ್ಲೂಕು/ವಲಯಗಳಲ್ಲಿ ಹಾಗೂ ಕೇರಳ ರಾಜ್ಯದೊಡನೆ ಗಡಿ ಹಂಚಿಕೊಂಡಿರುವ ತಾಲ್ಲೂಕುಗಳನ್ನು ಹೊರತುಪಡಿಸಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಿಗೆ ಈ ಕಛೇರಿಯ ಸುತ್ತೋಲೆ ದಿನಾಂಕ:10/06/2021 ರಂತೆ ಶಾಲೆಗಳನ್ನು ಭೌತಿಕವಾಗಿ ಪ್ರಾರಂಭಿಸದೆ, ಪರ್ಯಾಯ ವಿಧಾನದಲ್ಲಿ ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಗಳನ್ನು ಮುಂದುವರೆಸಲು ತಿಳಿಸಿದೆ.*

ಪ್ರಸ್ತುತ ದಿನಾಂಕ:06/09/2021 ರಿಂದ ಕೋವಿಡ್-19ರ ಸೋಂಕಿನ ಪ್ರಮಾಣ ಶೇ.2ಕ್ಕಿಂತ ಕಡಿಮೆ ಇರುವ ತಾಲ್ಲೂಕು/ವಲಯಗಳಲ್ಲಿನ (ಕೇರಳ ರಾಜ್ಯದೊಡನೆ ಗಡಿ ಹಂಚಿಕೊಂಡಿರುವ ತಾಲ್ಲೂಕುಗಳನ್ನು

ಹೊರತುಪಡಿಸಿ) ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ 6 ರಿಂದ 8ನೇ ತರಗತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿದೆ.

- ಉಲ್ಲೇಖ-6ರಂತೆ ದಿನಾಂಕ:16/08/2021ರಂದು ನೀಡಿರುವ ಸೂಚನೆಯಂತೆ 9 ಮತ್ತು 10ನೇ ತರಗತಿಗಳನ್ನು ಮುಂದುವರೆಸುವುದು (ಶನಿವಾರ ಹೊರತುಪಡಿಸಿ).
- ರಾಜ್ಯದಲ್ಲಿನ ಕೋವಿಡ್-19ರ ಸೋಂಕಿನ ಪ್ರಮಾಣ ಶೇ.2ಕ್ಕಿಂತ ಕಡಿಮೆ ಇರುವ ತಾಲ್ಲೂಕು/ವಲಯಗಳಲ್ಲಿ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ 6 ರಿಂದ 8ನೇ ತರಗತಿಗಳನ್ನು ದಿನಾಂಕ:06/09/2021 ರಿಂದ ಪ್ರತಿ ದಿನ ಕೆಳಕಂಡಂತೆ ಸೂಚಿಸಿದ ಅವಧಿಗಳಲ್ಲಿ ಭೌತಿಕ ತರಗತಿಗಳನ್ನು ನಡೆಸಲು ತಿಳಿಸಿದೆ.
- ಶಾಲೆ ಪ್ರಾರಂಭಿಸುವ ಕುರಿತು ಉಲ್ಲೇಖ (2)ರ ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದಂತೆ (ಎಸ್.ಒ.ಪಿ)ಯಂತೆ ಮಕ್ಕಳ ರಕ್ಷಣೆಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
- ಮಕ್ಕಳು ಶಾಲೆಗೆ ಹಾಜರಾಗುವಾಗ ಪೋಷಕರ ಅನುಮತಿ ಪತ್ರ ತರುವುದು ಕಡ್ಡಾಯ. ಅನುಮತಿ ಪತ್ರದಲ್ಲಿ ಮಗುವಿಗೆ ಕೋವಿಡ್-19ರ ಸೋಂಕಿನ ಯಾವುದೇ ಲಕ್ಷಣಗಳಿರುವುದಿಲ್ಲವೆಂಬುದನ್ನು ದೃಢೀಕರಿಸಬೇಕು.
- ಶಾಲೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ಮನೆಯಿಂದಲೇ ಅಗತ್ಯವಾದ ಕುಡಿಯುವ ನೀರು/ ಉಪಹಾರವನ್ನು ತರುವಂತೆ ಸೂಚನೆ ನೀಡುವುದು.
- ಅವಶ್ಯಕತೆ ಅನುಸಾರ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯಲು ಶುದ್ಧ ಬಿಸಿ ನೀರಿನ ವ್ಯವಸ್ಥೆ ಮಾಡುವುದು.
- ಶಾಲೆಗಳಲ್ಲಿ ವಿದ್ಯಾರ್ಥಿಗಳ ಭೌತಿಕ ಹಾಜರಾತಿ ಕಡ್ಡಾಯವಲ್ಲ. ಆನ್‌ಲೈನ್ ಅಥವಾ ಪರ್ಯಾಯ ವಿಧಾನದಲ್ಲಿ ಹಾಜರಾಗಬಹುದು.
- ಶಾಲೆಗೆ ಹಾಜರಾಗಲು ಬಯಸದೇ ಇರುವ ವಿದ್ಯಾರ್ಥಿಗಳಿಗೆ ಈಗ ಅನುಸರಿಸುತ್ತಿರುವ ಆನ್‌ಲೈನ್/ ಇತರೆ ಪರ್ಯಾಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಬೇಕು/ಒದಗಿಸಬೇಕು.
- ಶನಿವಾರದಂದು 9 ಮತ್ತು 10ನೇ ತರಗತಿಗಳಿಗೆ ಸೇರಿದಂತೆ ಯಾವುದೇ ಮಕ್ಕಳಿಗೆ ಭೌತಿಕ ತರಗತಿಗಳನ್ನು ನಡೆಸಬಾರದು.
- ಶನಿವಾರದಂದು ಸ್ಥಳೀಯ ಆಡಳಿತದ ಸಹಕಾರದೊಂದಿಗೆ (ಗ್ರಾಮ ಪಂಚಾಯ್ತಿ/ಪಟ್ಟಣ ಪಂಚಾಯ್ತಿ/ನಗರ ಸಭೆ/ ಪುರಸಭೆ ಇತ್ಯಾದಿ) ಶಾಲೆಗಳನ್ನು ಸ್ಯಾನಿಟೈಜ್ ಮಾಡುವ ಕಾರ್ಯವನ್ನು ಕೈಗೊಳ್ಳುವುದು.

ಭೌತಿಕವಾಗಿ ತರಗತಿಗಳನ್ನು ನಡೆಸಲು ಅವಶ್ಯಕ ದೈಹಿಕ ಅಂತರ ಕಾಪಾಡುವ ದೃಷ್ಟಿಯಿಂದ ಶಾಲಾ ಹಂತದಲ್ಲಿ ಕೊಠಡಿಗಳ ಲಭ್ಯತೆ, ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಯನ್ನು ಆಧರಿಸಿ 6 ರಿಂದ 8ನೇ ತರಗತಿಗಳ ವಿದ್ಯಾರ್ಥಿಗಳನ್ನು 15 ರಿಂದ 20 ಸಂಖ್ಯೆಯ ವಿದ್ಯಾರ್ಥಿಗಳ ತಂಡಗಳನ್ನಾಗಿ ಮಾಡಿಕೊಂಡು ಭೌತಿಕ ತರಗತಿಗಳನ್ನು ನಡೆಸಲು ತಿಳಿಸಿದೆ.

- **ಪ್ರೌಢ ಶಾಲೆಯಲ್ಲಿನ 8ನೇ ತರಗತಿ ನಿರ್ವಹಣೆಗೆ ಸಲಹಾತ್ಮಕ ವೇಳಾ ಪಟ್ಟಿ :**

1. 8ನೇ ತರಗತಿ ಮಕ್ಕಳಿಗೆ ಅಪರಾಹ್ನ 2.00 ರಿಂದ 4.30 ಗಂಟೆಯವರೆಗೆ ಎರಡನೇ ಪಾಳಿಯಲ್ಲಿ ತರಗತಿಗಳನ್ನು ನಡೆಸುವುದು (ಸೋಮವಾರ ದಿಂದ ಶುಕ್ರವಾರದವರೆಗೆ ಮಾತ್ರ) ಶನಿವಾರದಂದು ಮಕ್ಕಳಿಗೆ ರಜೆ ನೀಡಿ ಶಾಲೆಯ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳುವುದು.

| **ದಿನ** | **ಅವಧಿ** | **ಪ್ರಥಮ ಭಾಷೆ** | **ದ್ವಿತೀಯ ಭಾಷೆ** | **ತೃತೀಯ ಭಾಷೆ** | **ಗಣಿತ** | **ವಿಜ್ಞಾನ** | **ಸಮಾಜ ವಿಜ್ಞಾನ** | **ದೈಹಿಕ ಶಿಕ್ಷಣ** | **ಇತರೆ** |
|---|---|---|---|---|---|---|---|---|---|
| **ಸೋಮ ವಾರ** | 2.00 - 2.45 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 |
| | 2.45 - 3.30 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 |
| | 3.30 - 3.45 | ವಿರಾಮ | | | | | | | |
| | 3.45 - 4.30 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 |

| | | | | | | | | | |
|---|---|---|---|---|---|---|---|---|---|
| ಮಂಗಳ ವಾರ | 2.00 – 2.45 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 |
| | 2.45 – 3.30 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 |
| | 3.30 – 3.45 | ವಿರಾಮ | | | | | | | |
| | 3.45 – 4.30 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 |
| ಬುಧವಾರ | 2.00 – 2.45 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 |
| | 2.45 – 3.30 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 |
| | 3.30 – 3.45 | ವಿರಾಮ | | | | | | | |
| | 3.45 – 4.30 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 |
| ಗುರುವಾರ | 2.00 – 2.45 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 |
| | 2.45 – 3.30 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 |
| | 3.30 – 3.45 | ವಿರಾಮ | | | | | | | |
| | 3.45 – 4.30 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 |
| ಶುಕ್ರವಾರ | 2.00 – 2.45 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 |
| | 2.45 – 3.30 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 |
| | 3.30 – 3.45 | ವಿರಾಮ | | | | | | | |
| | 3.45 – 4.30 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 |
| ಶನಿವಾರ | ವಿದ್ಯಾರ್ಥಿಗಳಿಗೆ ರಜೆ ನೀಡಿ ಶಾಲಾ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಳ್ಳುವುದು. | | | | | | | | |

2. ವಿದ್ಯಾರ್ಥಿಗಳ ಕಲಿಕೆಗೆ ಪ್ರಸ್ತುತ ಪ್ರಸಾರ ಮಾಡುತ್ತಿರುವ "ಸಂವೇದ" ದೂರದರ್ಶನ ಪಾಠಗಳ ಮೂಲಕ ಹೆಚ್ಚುವರಿ ಬೆಂಬಲವನ್ನು ಒದಗಿಸುವುದು.

**ಪ್ರಾಥಮಿಕ ಶಾಲೆಗಳಲ್ಲಿನ 6 ರಿಂದ 8ನೇ ತರಗತಿಗಳ ನಿರ್ವಹಣೆಗೆ ಸಲಹಾತ್ಮಕ ವೇಳಾಪಟ್ಟಿ.**

**3. 6 ರಿಂದ 8ನೇ ತರಗತಿ ಇರುವಂತಹ ಪ್ರಾಥಮಿಕ ಶಾಲೆಗಳಲ್ಲಿ :**

| ದಿನಗಳು | ಸಮಯ | ನಡೆಯುವ ತರಗತಿಗಳು |
|---|---|---|
| ಸೋಮವಾರ ದಿಂದ ಶುಕ್ರವಾರದವರೆಗೆ | ಬೆಳಿಗ್ಗೆ 10.00 ರಿಂದ ಅಪರಾಹ್ನ 1.30 | 6, 7 ಮತ್ತು 8 |

6 ರಿಂದ 8ನೇ ತರಗತಿ ಮಕ್ಕಳನ್ನು ಶಾಲೆಗೆ ಕರೆಸುವುದು (ಶಾಲೆಯಲ್ಲಿ ಇರುವ ಒಟ್ಟು ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಪ್ರತಿ ತಂಡಕ್ಕೆ 15 ರಿಂದ 20 ಮಕ್ಕಳ ತಂಡಗಳನ್ನು ರಚಿಸುವುದು. ಪ್ರತಿಯೊಬ್ಬ ಶಿಕ್ಷಕರು ಒಂದು ತಂಡದ ಮಕ್ಕಳಿಗೆ ಪ್ರತೀ ಅವಧಿಯಲ್ಲಿ ಬೋಧನೆ ಮಾಡುವುದು).

| ದಿನ | ಅವಧಿ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ | ದೈಹಿಕ ಶಿಕ್ಷಣ | ಇತರೆ |
|---|---|---|---|---|---|---|---|---|---|
| ಸೋಮ ವಾರ | 10.00–10.40 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 |
| | 10.40–11.20 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 |
| | 11.20–12.00 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 |
| | 12.00–12.10 | ವಿರಾಮ | | | | | | | |
| | 12.10–12.50 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 |
| | 12.50–01.30 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 |

| | | | | | | | | | |
|---|---|---|---|---|---|---|---|---|---|
| ಮಂಗಳ ವಾರ | 10.00-10.40 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 |
| | 10.40-11.20 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 |
| | 11.20-12.00 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 |
| | 12.00-12.10 | ವಿರಾಮ | | | | | | | |
| | 12.10-12.50 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 |
| | 12.50-01.30 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 |
| ಬುಧವಾರ | 10.00-10.40 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 |
| | 10.40-11.20 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 |
| | 11.20-12.00 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 |
| | 12.00-12.10 | ವಿರಾಮ | | | | | | | |
| | 12.10-12.50 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 |
| | 12.50-01.30 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 |
| ಗುರುವಾರ | 10.00-10.40 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 |
| | 10.40-11.20 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 |
| | 11.20-12.00 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 |
| | 12.00-12.10 | ವಿರಾಮ | | | | | | | |
| | 12.10-12.50 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 |
| | 12.50-01.30 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 |
| ಶುಕ್ರವಾರ | 10.00-10.40 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 | ತಂಡ-4 |
| | 10.40-11.20 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 | ತಂಡ-3 |
| | 11.20-12.00 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 | ತಂಡ-2 |
| | 12.00-12.10 | ವಿರಾಮ | | | | | | | |
| | 12.10-12.50 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 | ತಂಡ-1 |
| | 12.50-01.30 | ತಂಡ-1 | ತಂಡ-2 | ತಂಡ-3 | ತಂಡ-4 | ತಂಡ-5 | ತಂಡ-6 | ತಂಡ-7 | ತಂಡ-8 |
| ಶನಿವಾರ | ವಿದ್ಯಾರ್ಥಿಗಳಿಗೆ ರಜೆ ನೀಡಿ ಶಾಲಾ ಸ್ವಚ್ಛತಾ ಕಾರ್ಯವನ್ನು ಹಮ್ಮಿಕೊಳ್ಳುವುದು. | | | | | | | | |

ಈ ವೇಳಾಪಟ್ಟಿಯನ್ನು ಸಲಹಾತ್ಮಕವಾಗಿ ನೀಡಲಾಗಿದೆ. ಆಯಾ ಶಾಲೆಯಲ್ಲಿರುವ ಶಿಕ್ಷಕರ ಸಂಖ್ಯೆ, ಮಕ್ಕಳ ಂಖ್ಯೆ ಹಾಗೂ ಕೊಠಡಿ/ಸ್ಥಳಾವಕಾಶವನ್ನು ಆಧರಿಸಿ ಸ್ಥಳೀಯವಾಗಿ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆ. ಕುರಿತು ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) & ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಕ್ಷೇತ್ರ ಕ್ಷಣಾಧಿಕಾರಿಗಳು ಮಾರ್ಗದರ್ಶನ ನೀಡುವುದು.

2021-22ನೇ ಸಾಲಿನಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಶಾಲೆಗಳನ್ನು ಪುನರಾರಂಭಿಸಲು ಉಲ್ಲೇಖ-2ರಲ್ಲಿನ ಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಓಪಿ) ವನ್ನು ಕಡ್ಡಾಯವಾಗಿ ಅನುಸರಿಸುವುದು.

- 6 ರಿಂದ 8ನೇ ತರಗತಿಗಳ ಭೌತಿಕ ತರಗತಿಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳು ಮನೆಯಿಂದಲೇ ಅವರಿಗೆ ಅಗತ್ಯವಿರುವ ಊಟ/ಉಪಹಾರ ಮತ್ತು ಕುಡಿಯಲು ಶುದ್ಧ ನೀರನ್ನು ತರುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.

- ಕೋವಿಡ್-19ರ ಪಾಸಿಟಿವಿಟಿ ದರವು ಶೇ.2ಕ್ಕಿಂತ ಕಡಿಮೆ ಇರುವ ತಾಲ್ಲೂಕು/ವಲಯಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು.

➢ ಕೇರಳ ಗಡಿಭಾಗಕ್ಕೆ ಹೊಂದಿಕೊಂಡಿರುವ ತಾಲ್ಲೂಕು/ವಲಯಗಳಲ್ಲಿ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ಶಾಲೆಗಳನ್ನು ಪ್ರಾರಂಭಿಸುವುದು.

➢ ಸಾರಿಗೆ ಇಲಾಖೆಯು ವಿವಿಧ ಸಾರಿಗೆ ನಿಗಮಗಳಲ್ಲಿ ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಟ್ರಿಪ್ ಒದಗಿಸಲು ಅವಶ್ಯ ಕ್ರಮವಹಿಸುವುದು.

➢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಲ್ಲ. ಶಾಲೆಗೆ ಹಾಜರಾಗಲು ಬಯಸದೇ ಇರುವ ವಿದ್ಯಾರ್ಥಿಗಳಿಗೆ ಈಗ ಅನುಸರಿಸುತ್ತಿರುವ ಆನ್‌ಲೈನ್/ ಇತರೆ ಪರ್ಯಾಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಬೇಕು/ಒದಗಿಸಬೇಕು.

➢ ಉಳಿದಂತೆ ಉಲ್ಲೇಖ(2)ರ ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP)ಗಳನ್ನು ಅನುಸರಿಸುವುದು.

**ವಿಶೇಷ ಸೂಚನೆ:-**

ಉಪನಿರ್ದೇಶಕರು (ಆಡಳಿತ) & (ಅಭಿವೃದ್ಧಿ) ರವರು ತಮ್ಮ ಜಿಲ್ಲೆಗಳಲ್ಲಿನ ತಾಲ್ಲೂಕು/ವಲಯಗಳಲ್ಲಿ ಶಾಲೆ ಪ್ರಾರಂಭವಾಗಿರುವ ಬಗ್ಗೆ ಮಾಹಿತಿಯನ್ನು ನೀಡುವುದು. ಶಾಲೆಯನ್ನು ಪ್ರಾರಂಭಿಸದೇ ಇರುವ ತಾಲ್ಲೂಕು/ ವಲಯಗಳ/ಶಾಲೆಗಳ ವಿವರವನ್ನು ಪತ್ಯೇಕವಾಗಿ primarydpi@gmail.com ಗೆ ಮಾಹಿತಿಯನ್ನು ಸಲ್ಲಿಸುವುದು.

ತರಗತಿಗಳನ್ನು ನಡೆಸಲು ಶಾಲಾ ಹಂತದಲ್ಲಿ ಕೊಠಡಿಗಳ ಲಭ್ಯತೆ, ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಯನ್ನು ಆಧರಿಸಿಕೊಂಡು ಎಸ್.ಓ.ಪಿ ಪಾಲನೆಗೋಸ್ಕರ ಶಾಲಾ ವೇಳಾ ಪಟ್ಟಿಯನ್ನು ಪರಿಷ್ಕರಿಸಿ ತರಗತಿಗಳನ್ನು ನಡೆಸಬಹುದಾಗಿದೆ.

ಉಲ್ಲೇಖ(2)ರ ಸುತ್ತೋಲೆಯಲ್ಲಿರುವ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದಲ್ಲಿನ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಉಪನಿರ್ದೇಶಕರು(ಆಡಳಿತ) ಇವರು ಅಗತ್ಯ ಕ್ರಮವಹಿಸಲು ಸೂಚಿಸಿದೆ.

ಉಲ್ಲೇಖ (5)ರಲ್ಲಿ ಪ್ರಸಕ್ತ 2021-22ನೇ ಸಾಲಿನ ಮೌಲ್ಯಾಂಕನ ಮತ್ತು ವಿಶ್ಲೇಷಣೆ ಬಗ್ಗೆ ಕ್ರಮವಹಿಸಲು ಸೂಚನೆ ನೀಡಿದ್ದು, ಅದರಂತೆ ಪ್ರತಿ ಮಾಹೆವಾರು / ಕಾಲಕಾಲಕ್ಕೆ ಚೈಲ್ಡ್ ಪ್ರೋಫೈಲ್ / ಪೂರಕ ದಾಖಲೆ ಆಧರಿಸಿ ಮಕ್ಕಳ ಪ್ರಗತಿ ದಾಖಲಿಸಿಟ್ಟುಕೊಳ್ಳುವುದು. ಸದರಿ ಮಾಹಿತಿಗಳನ್ನು SATS ನಲ್ಲಿ ಅಪ್‌ಡೇಟ್ ಮಾಡುವುದು. ಇದು ಅನಿವಾರ್ಯ ಸಂದರ್ಭಗಳಲ್ಲಿ ಫಲಿತಾಂಶ ನಿರ್ಧರಿಸಲು ಸಹಾಯವಾಗುವಂತಿರಬೇಕು.

ಕೋವಿಡ್ ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆಗಳನ್ನು ಪಾಲಿಸಲು ತಿಳಿಸುತ್ತಾ ಸದರಿ ಆದೇಶವು ಸರ್ಕಾರವು ಕಾಲ ಕಾಲಕ್ಕೆ ಸೂಚಿಸುವ ಆದೇಶಗಳಿಗೆ / ಬದಲಾವಣೆಗೆ ಒಳಪಟ್ಟಿರುತ್ತದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಇವರಿಗೆ:-

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸುತ್ತಾ, ಸರ್ಕಾರದ ಹಾಗೂ ಆರೋಗ್ಯ ಇಲಾಖೆಯ ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರ ನಡವಳಿಯಂತೆ ಕ್ರಮವಹಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಮೂಲಕ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು:-

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ರವರಿಗೆ ಮಾಹಿತಿಗಾಗಿ
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
7. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
8. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ರವರಿಗೆ ಮಾಹಿತಿಗಾಗಿ
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
10. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
11. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
12. ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
13. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ
14. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
15. ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
16. ಕಛೇರಿ ಪ್ರತಿ.